**ಸಿ.ಸಿ ಸಂಖ್ಯೆ: 516/2025**

**ಚಾಸಾ–10/ಫ್ರಾಸಾಃ 7**

**ದಿನಾಂಕ 04.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಕಂದಾಯ ನಿರೀಕ್ಷಕರಿಗೆ ನೀಡಿದ ವರದಿಯ ನೈಜ ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–23 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. (ಸದರಿ ದಾಖಲೆ ನೈಜಪ್ರತಿಯಾದ ಕಾರಣ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಪ್ರತ್ಯೇಕವಾಗಿ ಗುರುತಿಸಲಾಗಿಲ್ಲ.) ಸ.ನಂಃ 85/1C3 ರ ಪಹಣಿ ಪತ್ರಿಕೆಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ–24 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ನನ್ನ ಪ್ರಕಾರ ನಾನು ಒಂದು ಜಮೀನನ್ನು ಗುರುತಿಸುವ ಸಲುವಾಗಿ ಸ್ಥಳಕ್ಕೆ ಹೋಗಿದ್ದೆ. ಆರೋಪಿ ಜಮೀನು ಹಾಗೂ ಪಿರ್ಯಾದುದಾರರ ಜಮೀನು ಒಂದಕ್ಕೊಂದು ತಾಗಿಕೊಂಡಿಲ್ಲ. ಹಿಂದಿನ ಕಾಲದಲ್ಲಿ ಜಾಗವನ್ನು ಅಳತೆ ಮಾಡಲು ಗ್ರಾಮ ಲೆಕ್ಕಾಧಿಕಾರಿಗಳಿಗೆ ಚೈನ್ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಕೊಡುತ್ತಿದ್ದರು ಎಂದರೆ ಸರಿ. ಈಗ ಜಾಗವನ್ನು ಸರ್ವೆ ಮಾಡಿ ಗುರುತಿಸುವ ಕಾರ್ಯವನ್ನು ಇಲಾಖೆಯ ಮೋಜಣಿದಾರರಿಗೆ ನೀಡಲಾಗುತ್ತದೆ ಎಂದರೆ ಸರಿ. ಈ ಪ್ರಕರಣದ ಜಮೀನನ್ನು ಗುರುತಿಸುವ ಸಲುವಾಗಿ ನನಗೆ ಸಹಕರಿಸಬೇಕೆಂದು ಮೋಜಣಿದಾರರು ಬೇಕೆಂದು ನಾನು ಮನವಿ ಕೊಟ್ಟಿಲ್ಲ ಹಾಗೂ ಮೋಜಣಿದಾರರನ್ನು ಜೊತೆಗೆ ಕರೆದುಕೊಂಡು ಹೋಗಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ

ಜಮೀನನ್ನು ಗುರುತಿಸಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ನಿಪಿ–23 ರ ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ